# ನಾಗ



**ತಮ್ಮಣ್ಣ ಬೀಗಾರ**

ಕಲೆ: ಸಂತೋಷ್ ಸಸಿಹಿತ್ಲು

ರವಿವಾರ ಶಾಲೆಗೆ ರಜೆ ಎನ್ನುವುದು ನಿಮಗೆಲ್ಲ ಗೊತ್ತು. ಹಾಗಾಗಿ ರೋಹಿತ್ ಪೇರಲೆ ಹಣ್ಣಿನ ಗಿಡದ ಅಡಿಯಲ್ಲಿ ನಿಂತಿದ್ದ. ಅಂದರೆ... ಅದೇ ಅವನಿಗೆ ರಜೆ ಅಲ್ಲವಾ, ಇಂದು ಏನೆಲ್ಲಾ ಮಾಡಬೇಕು ಎಂದು ಅವನ ಯೋಚನೆ. ಅವನ ಜೊತೆ ಆಡಲು ಅವನ ಮನೆಯಲ್ಲಿ ಯಾರೂ ಇಲ್ಲ. ಹತ್ತಿರದಲ್ಲಿ ಬೇರೆ ಮನೆಯೂ ಇಲ್ಲ. ಮನೆಯಿಂದ ಹೊರಗೆ ಹೋದರೆ ಅಮ್ಮ ಕರೆಯುತ್ತಾಳೆ. ಅವಳು ಕರೆದು ಸುಮ್ಮನಾಗುವುದಿಲ್ಲ. ‘ದಿನ ಕಳೆದಂತೆ ನೀನು ಹಾಳಾಗುತ್ತಿದ್ದೀಯ. ಬರಿ ಆಟವೇ ಆಯಿತು. ಶಾಲೆಯಲ್ಲಿ ಪ್ರಥಮ ಸ್ಥಾನ ಗಳಿಸಿ ನಮಗೆಲ್ಲ ಕೀರ್ತಿ ತರುವುದು ಯಾವಾಗ? ನಿನ್ನ ಅಪ್ಪ ಯಾವಾಗಲೂ ಶಾಲೆಯಲ್ಲಿ ಪ್ರಥಮ ರ್‍ಯಾಂಕ್ ಆಗಿದ್ದರಂತೆ. ಅವರ ಯೋಗ ಚೆನ್ನಾಗಿಲ್ಲ. ಹಾಗಾಗಿ ಪರಿಸರ ಕಾಳಜಿ ಅದು ಇದು ಅಂತ ಏನೇನೋ ಸೇವೆ ಮಾಡುತ್ತಾ ಬದುಕುತ್ತಾರೆ. ನನಗಂತೂ ಇದು ಇಷ್ಟವಿಲ್ಲ’ ಎಂದು ಉದ್ದಕ್ಕೆ ಹೇಳತೊಡಗುತ್ತಾಳೆ. ಅಮ್ಮನ ಈ ಉಪದೇಶ ರೋಹಿತನಿಗೆ ಇಷ್ಟವಾಗುವುದಿಲ್ಲ.

ಅಮ್ಮನ ಕಣ್ಣುತಪ್ಪಿಸಿ ಹೊರಗಂತೂ ಹೋಗಲಾಗದು. ನಮ್ಮ ಮನೆ ಸುತ್ತಲೇ ಆಟವಾಡಲು ಬೇಕಾದಷ್ಟು ಅವಕಾಶಗಳಿವೆ. ಹಳ್ಳದಲ್ಲಿ ಈಜಾಡುವುದು ಎಷ್ಟು ಖುಷಿ, ಮೊಬೈಲ್ ತೆಗೆದುಕೊಂಡು ತೋಟಕ್ಕೆ ಬರುವ ನವಿಲುಗಳನ್ನು ಹತ್ತಿರದಿಂದ ನೋಡುತ್ತಾ ವಿಡಿಯೋ ಮಾಡಬಹುದು... ಅಡಿಕೆ ಮರ ಹತ್ತಿ ಜಾರುವುದು ಎಷ್ಟು ಮಜವಾಗಿರುತ್ತದೆ! ನನ್ನ ಕ್ಲಾಸ್‌ಮೇಟ್ ನಾಗ. ಅವನ ಪುಟ್ಟ ಮನೆ ಗುಡ್ಡದ ಮೇಲೆ ಇದೆ. ಅವನು ಬಂದರೆ ಸಾಕಿತ್ತು. ಎಲ್ಲವನ್ನೂ ಮಾಡಬಹುದು. ತೆಂಗಿನ ಮರ ಹತ್ತಿ ಬೊಂಡ (ಎಳೆ ನೀರು) ತೆಗೆದು ಕುಡಿಯಬಹುದು. ಆದರೆ ನಾಗ ಬರಬೇಕಲ್ಲ... ಬಂದರೂ ಒಂದೊಂದು ಸಾರಿ ಅಮ್ಮ ಅವನಿಗೂ ಬೈಯ್ಯುತ್ತಾಳೆ ಎಂದೆಲ್ಲ ಯೋಚಿಸುತ್ತಾ ರೋಹಿತ್ ಪೇರಲೆ ಗಿಡ ಹತ್ತತೊಡಗಿದ.

ರೋಹಿತ್ ಪೇರಲೆ ಗಿಡ ಹತ್ತುತ್ತಿದ್ದಂತೆ ನಾಲ್ಕಾರು ಗಿಳಿಗಳು ಪುರ್‍ರನೆ ಗಿಡ ಬಿಟ್ಟು ಹಾರಿಹೋದವು. ಆ ಗಿಳಿಗಳು ರೋಹಿತ್‌ಗೆ ಮೊದಲು ಕಂಡಿರಲಿಲ್ಲ. ಇವೆಲ್ಲಾ ಎಲ್ಲಿದ್ದವು ಅನಿಸಿತು. ಹೌದು, ಅವುಗಳ ಹಸಿರು ಬಣ್ಣದಿಂದಾಗಿ ಎಲೆಗಳ ನಡುವೆ ಕುಳಿತುಕೊಂಡಿದ್ದರೆ ನಮ್ಮ ಕಣ್ಣಿಗೆ ಕಾಣುವುದಿಲ್ಲ. ಪೇರಲೆ ಹಣ್ಣೂ ಅಷ್ಟೇ. ಬೇಗನೆ ಸರಿಯಾಗಿ ಕಾಣದು. ಹಳದಿಯಾಗಿದ್ದರೆ ಕಾಣುತ್ತದೆ. ಆದರೆ ಅದನ್ನು ಗಿಳಿಗಳು ಆಗಲೇ ಅರ್ಧದಷ್ಟು ತಿಂದು ಮುಗಿಸಿರುತ್ತವೆ ಎಂದೆಲ್ಲಾ ಯೋಚಿಸುತ್ತಾ ಸುತ್ತಲೂ ನೋಡಿದ. ಅವನಿಗೆ ಒಂದು ದೊಡ್ಡ ಹಣ್ಣು ಕಾಣಿಸಿತು. ಅದನ್ನು ಕೊಯ್ಯಬೇಕು ಎನ್ನುವಷ್ಟರಲ್ಲಿ ರೋಹಿತ್ ಎಂದು ಯಾರೋ ಕರೆದಂತಾಯಿತು. ಕೆಳಗೆ ನೋಡಿದರೆ ನಾಗ ನಿಂತಿದ್ದ. ನಾಗನನ್ನು ಕಂಡೊಡನೆ ರೋಹಿತನಿಗೆ ಖುಷಿಯೋ ಖುಷಿ. ಬಂದೆ ಬಂದೆ ಎನ್ನುತ್ತಾ ದೊಡ್ಡ ಹಣ್ಣನ್ನು